ಪಿಡಬ್ಲೂ: 1

dದಿನ ದಿನಾಂಕ ೨೦-೦೩-೨೦೨೩ ರಂದು ಸಾಕ್ಷಿ **ವಿ.**ರಾಮಯ್ಯರವರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಸಿ ಜಿ ಅರ್ ಯವರಿಂದಃ

ನಾನು ಪುಟ್ಟೇನಹಳ್ಳಿಯಲ್ಲಿ ವಾಸವಾಗಿದ್ದೇನೆ. ನಾನು ನಿವೃತ್ತ ಉಪಾಧ್ಯಾಯ. ನನಗೆ ಈಗ ೨೫ ಸಾವಿರ ಪಿಂಚಣಿ ಬರುತ್ತದೆ. ನಾನು ಖರ್ಚು ವೆಚ್ಚದ ಲೆಕ್ಕವನ್ನು ಇಟ್ಟಿರುವುದಿಲ್ಲ. ಪ್ರತಿವಾದಿ ೧೫-೨೦ ವರ್ಷಗಳಿಂದ ನನಗೆ ಪರಿಚಿತರು. ಪ್ರತಿವಾದಿಯ ಕುಟುಂಬದವರೂ ಸಹ ನನಗೆ ಪರಿಚಿತರು. ಸಾಕ್ಷಿ ಮುಂದುವರೆದು ಪ್ರತಿವಾದಿ ನಮ್ಮ ಪಕ್ಕದ ಊರಿನವರೆಂದು ನುಡಿಯುತ್ತಾರೆ. ಪ್ರತಿವಾದಿ ವ್ಯವಸಾಯ ಮಾಡುತ್ತಾರೆ. ಪ್ರತಿವಾದಿಗೆ ಸ್ವಂತ ಜಮೀನಿಲ್ಲ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಯಾವುದೇ ಜಮೀನಿಲ್ಲ ಅವರು ಕೂಲಿ ಮಾಡುತ್ತಾರೆಂದರೆ ಸಾಕ್ಷಿ ಸರಿಯಲ್ಲ ಜಮೀನಿದೆ ಎಂದು ನುಡಿಯುತ್ತಾರೆ.

ಪ್ರತಿವಾದಿ ನನ್ನ ಮೇಲೆ ಪ್ರೀತಿ, ವಿಶ್ವಾಸ ಮತ್ತು ನಂಬಿಕೆ ಇಟ್ಟುಕೊಂಡಿದ್ದರೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ಪ್ರತಿವಾದಿ ಮೇಲೆ ನಂಬಿಕೆ, ವಿಶ್ವಾಸ ಇರಲಿಲ್ಲ ಎಂದರೆ ಸರಿ. ನಾನು ಪ್ರತಿವಾದಿಯೊಂದಿಗೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ, ಮಾಡಿದ್ದೇನೆ. ದಿನಾಂಕ ೧೭-೦೪-೨೦೧೭ ರಲ್ಲಿ ೪೮ ಸಾವಿರ ರೂ. ಚೆಕ್ಕನ್ನು ನಾನು ಪ್ರತಿವಾದಿಗೆ ನೀಡಿರುತ್ತೇನೆ. ದಿನಾಂಕ ೨೨-೦೫-೨೦೧೭ ರಲ್ಲಿ ೩೦ ಸಾವಿರ ರೂ ಚೆಕ್ಕನ್ನು ನಾನು ಪ್ರತಿವಾದಿಗೆ ನೀಡಿರುತ್ತೇನೆ. ಪ್ರತಿವಾದಿ ಮೇಲೆ ನಂಬಿಕೆ ಇಲ್ಲದಿದ್ದರೂ ಹಣ ನೀಡಿದ್ದೀರಾ ಎಂದರೆ ಸಾಕ್ಷಿ ಪ್ರತಿವಾದಿ ತನ್ನ ಹೆಣ್ಣು ಮಕ್ಕಳ ಮದುವೆ ಎಂದು ನನ್ನ ಕೈ-ಕಾಲು ಹಿಡಿದಿದ್ದರಿಂದ ನಾನು ಹಣವನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ನಾನು ಹಣ ಕೊಡುವುದು ಹಾಗೂ ತೆಗೆದುಕೊಳ್ಳುವುದನ್ನು ಚೆಕ್ ಮೂಲಕ ಮಾಡುತ್ತೇನೆಂದರೆ ಸರಿ. ಸಾಕ್ಷಿ ಮುಂದುವರೆದು ಹಣಕ್ಕೆ ಗ್ಯಾರಂಟಿಯಾಗಿ ಚೆಕ್ಕನ್ನು ಪಡೆದುಕೊಳ್ಳುತ್ತೇನೆಂದು ನುಡಿಯುತ್ತಾರೆ. ಸಾಮಾನ್ಯವಾಗಿ ನಾನು ಯಾರಿಗಾದರೂ ಹಣ ನೀಡುವಾಗ ಗ್ಯಾರಂಟಿಯಾಗಿ ಚೆಕ್ಕನ್ನು ಪಡೆದುಕೊಳ್ಳುತ್ತೇನೆ.

ನಾನು ಇಲ್ಲಿಯವರೆಗೆ ಪ್ರತಿವಾದಿ ಒಬ್ಬರಿಗೆ ಮಾತ್ರ ಹಣ ನೀಡಿರುತ್ತೇನೆ ಬೇರೆ ಯಾರಿಗೂ ಹಣ ನೀಡಿರುವುದಿಲ್ಲ. ಮದುವೆಯ ನಂತರ ಪ್ರತಿವಾದಿ ಹಣವನ್ನು ಮರಳಿ ಕೊಡುತ್ತೇನೆಂದು ಹೇಳಿದ್ದರು. ೪೮ ಸಾವಿರ ಹಣವನ್ನು ಪ್ರತಿವಾದಿ ನನಗೆ ಮರಳಿ ನೀಡಿದರೆಂದರೆ ಸರಿಯಲ್ಲ. ನಾನು ಹಾಕಿರುವ ವಾದಪತ್ರದಲ್ಲಿ ಶೇಕಡ ೨ ರಂತೆ ಸಾಲ ನೀಡಿದ್ದೇನೆಂದರೆ ಸರಿ.

ನೀವು ಶಿಕ್ಷಕನಾಗಿರುವುದರಿಂದ ಬಡ್ಡಿ ವ್ಯವಹಾರ ಮಾಡಲು ಲೇವಾದೇವಿ ಪರವಾನಗಿ ಪಡೆಯಬೇಕೆನ್ನುವುದು ಗೊತ್ತಿತ್ತೇ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಸಾಕ್ಷಿ ಮುಂದುವರೆದು ಪ್ರತಿವಾದಿಯನ್ನು ಹೊರತು ಪಡಿಸಿ ಬೇರೆ ಯಾರಿಗೂ ನಾನು ಸಾಲ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಬಡ್ಡಿಯನ್ನು ಪಡೆಯಲು ಲೇವಾದೇವಿ ಪರವಾನಗಿಯನ್ನು ಪಡೆಯಬೇಕೆನ್ನುವ ವಿಚಾರ ನನಗೆ ಗೊತ್ತಿತ್ತೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿವೃತ್ತಿ ತನಕವೂ ನಾನು ಯಾರಿಗೂ ಸಾಲವಾಗಿ ಹಣವನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

೪೮ ಸಾವಿರ ರೂ ಹಣವು ಮರುಪಾವತಿ ಆಗದೇ ಇದ್ದ ಬಾಬ್ತು ೨ನೇ ಬಾರಿ ೩೦ ಸಾವಿರ ನೀಡುವಾಗ ಬಡ್ಡಿಯನ್ನು ಕಟಾವು ಮಾಡಿ ನೀಡಿದ್ದೀರಾ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮೊದಲನೇ ಬಾರಿ ಹಣ ನೀಡಿದ ಬಳಿಕ ೨ನೇ ಬಾರಿ ಮತ್ತೆ ಹಣ ಕೇಳಿದರೆ ಬಡ್ಡಿಯನ್ನು ಕಟಾವು ಮಾಡಿ ನೀಡುತ್ತಾರೆಂದರೆ ಸಾಕ್ಷಿ ನಾನು ಹಾಗೇ ಮಾಡಿರುವುದಿಲ್ಲ ಸಾಕ್ಷಿ ಮುಂದುವರೆದು ಮದುವೆಗೆ ಎರಡೇ ದಿನ ಬಾಕಿ ಇದೆ ಎಂದು ಹೇಳಿ ೨ನೇ ಬಾರಿ ನನ್ನ ಬಳಿ ಪ್ರತಿವಾದಿ ಹಣ ಪಡೆದುಕೊಂಡಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಬೇರೆ ಯಾವುದೇ ಬಡ್ಡಿ ವ್ಯವಹಾರ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ನಾನು ನಗದಾಗಿ ಬೇರೆ ಯಾರಿಗೂ ಹಣ ಕೊಡುವುದಿಲ್ಲ ಎಂದರೆ ಸರಿ. ೨೨-೦೫-೨೦೧೭ ರ ನಂತರ ನನ್ನ ಮನೆಯಲ್ಲಿ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯಲ್ಲಿ ೩ ಲಕ್ಷ ಹಣ ೨೨-೦೫-೨೦೧೭ ರ ನಂತರ ಇತ್ತು. ಯಾವಾಗ ೩ ಲಕ್ಷ ಹಣವನ್ನು ನೀವು ಮನೆಯಲ್ಲಿ ಇಟ್ಟುಕೊಂಡಿರುತ್ತೀರಿ ಎಂದರೆ ಸಾಕ್ಷಿ ನನಗೆ ಅವಶ್ಯಕತೆ ಬಂದಾಗ ಹಣವನ್ನು ಬ್ಯಾಂಕಿನಿಂದ ತೆಗೆದುಕೊಂಡು ಬಂದು ಇಟ್ಟುಕೊಂಡಿರುತ್ತೇನೆಂದು ನುಡಿಯುತ್ತಾರೆ. ದಿನಾಂಕ ೨೨-೦೫-೨೦೧೭ ರ ನಂತರ ಹಣವನ್ನು ಡ್ರಾ ಮಾಡಿದ ಬಾಬ್ತು ದಾಖಲಾತಿಯನ್ನು ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ೩ ಲಕ್ಷ ಹಣ ಒಂದು ವರ್ಷದವರೆಗೂ ನಮ್ಮ ಮನೆಯಲ್ಲೇ ಇತ್ತು. ೩ ಲಕ್ಷ ಹಣವನ್ನು ಹೊರತು ಪಡಿಸಿ ಬೇರೆ ಯಾವುದೇ ಹಣ ಮನೆಯಲ್ಲಿ ಇರಲಿಲ್ಲ.

ದಿನಾಂಕ ೦೪-೦೭-೨೦೧೭ ರ ನಂತರ ನಡೆದಂತಹ ವ್ಯವಹಾರಗಳನ್ನು ತೋರಿಸುವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ನನ್ನ ಬ್ಯಾಂಕ್ ಖಾತೆಯಲ್ಲಿ ನಮೂದಾಗಿರುತ್ತದೆಂದು ನುಡಿಯುತ್ತಾರೆ. ಈಗ ಸದರಿ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಆನ್‌ಡಿಮ್ಯಾಂಡ್ ಪ್ರಾಮಿಸರಿ ನೋಟ್ ಮತ್ತು ಹಣ

ಸಂದಾಯದ ಬಗ್ಗೆ ಹೇಗೆ ಅರಿವು ಬಂದಿರುತ್ತದೆಂದರೆ ಸಾಕ್ಷಿ ೨ ಲಕ್ಷ ಹಣವನ್ನು ನಾನು ನೀಡಿದ್ದರಿಂದ ಅದರ ಜವಾಬ್ದಾರಿ ಇದುದ್ದರಿಂದ ತಿಳಿದುಕೊಂಡೆ ಎಂದು ನುಡಿಯುತ್ತಾರೆ. ದಿನಾಂಕ ೧೦-೧೦-೨೦೧೭ ರಂದು ನಾನು ಪ್ರತಿವಾದಿಯಿಂದ ನಿಪಿ-೧ ನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಮುಂದುವರೆದು ನಾನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮೊದಲು ಸಾಲ ಮಾಡಿದಾಗ ನಾನು ಸಾಲ ಪಡೆದವರು ನನ್ನಿಂದ ಡಿಮ್ಯಾಂಡ್ ಪ್ರಾಮಿಸರಿ ನೋಟುಗಳನ್ನು ಬರೆಸಿಕೊಂಡಿದ್ದರು ಹಾಗಾಗಿ ನನಗೆ ಈ ಬಗ್ಗೆ ತಿಳುವಳಿಕೆ ಇದೆ ಎಂದು ನುಡಿಯುತ್ತಾರೆ. ಆನ್‌ಡಿಮ್ಯಾಂಡ್ ಪ್ರಾಮಿಸರಿ ನೋಟನ್ನು ಬಿ.ಎಸ್ ರಾಜೇಶ್ ಸ್ಟಾಂಪ್‌ವೆಂಡರ್ ಬಳಿ ದಿನಾಂಕ ೧೦-೧೦-೧೭ ರಂದು ಖರೀದಿ ಮಾಡಿರುತ್ತೇನೆ. ಅನ್‌ಡಿಮ್ಯಾಂಡ್ ಪ್ರಾಮಿಸರಿ ನೋಟ್‌ಗೆ ಆಗ ೧೦-೧೫ ರೂ. ಇತ್ತು.

ಯಾವುದೇ ಬರವಣಿಗೆಯನ್ನು ಮಾಡಿದಾಗ ಚಿತ್ತಾದಲ್ಲಿ ಸಹಿಯನ್ನು ಪಡೆದುಕೊಳ್ಳಬೇಕೆಂದರೆ ಸರಿ. ನಿಪಿ-೧ ರಲ್ಲಿ ನೀವು ೨ನೇ ಲೈನ್‌ನಲ್ಲಿ ಒಡೆದು ಹಾಕಿರುವ ಜಾಗದಲ್ಲಿ ಸಹಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಆ ವಿಚಾರ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸಾಲವನ್ನು ಒಡೆದು ಹಾಕಿ ಲಕ್ಷ ಎಂದು ಬರೆದಿರುವುದರಿಂದ ನಾನು ಸುಮ್ಮನಾದೆ ಎಂದು ನುಡಿಯುತ್ತಾರೆ. ೨ ಲಕ್ಷ ರೂಪಾಯಿಯ ಎಷ್ಟು ಮುಖಬೆಲೆಯ ನೋಟುಗಳನ್ನು ನೀಡಿದ್ದೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ೧೦೦, ೨೦೦೦ ಹಾಗೂ ೫೦೦ ರೂ. ಮುಖಬೆಲೆಯ ನೋಟುಗಳಾಗಿದ್ದವು. ಆ ದಿನ ಸದರಿ ನೋಟುಗಳು ಎಷ್ಟು ಎಷ್ಟು ಇದ್ದವೆಂದು ಹೇಳಲಾಗುವುದಿಲ್ಲ. ನಿಪಿ-೧ ನ್ನು ದೊಡ್ಡಬಳ್ಳಾಪುರದ ಸ್ಟಾಂಪ್‌ವೆಂಡರ್ ಡಿ ಎಸ್ ರಾಜೇಶ್ ಬಳಿ ಬರೆಸಿರುತ್ತೇನೆ. ಆಗ ಅಂದಾಜು ಮಧ್ಯಾಹ್ನ ೧೨-೦೦ ರಿಂದ ೦೧-೦೦ ಗಂಟೆಯಾಗಿರುತ್ತದೆ. ಡಿ ಎಸ್ ರಾಜೇಶ್‌ರವರ ಕಛೇರಿ ತಾಲ್ಲೂಕು ಕಛೇರಿ ಬಳಿ ಬರುತ್ತದೆ.

ನಿಪಿ-೧ ನ್ನು ಬರೆಯುವ ಸಮಯದಲ್ಲಿ ನಾನು, ಪ್ರತಿವಾದಿ, ಆನಂದಪ್ಪ, ಮೋಹನ್‌ಕುಮಾರ್ ಇದ್ದೆವು. ನಿಪಿ-೧ ನ್ನು ಡಿ ಎಸ್ ರಾಜೇಶ್ ಕಛೇರಿಯಲ್ಲಿ ಬರೆದಿರುವುದಿಲ್ಲ ಹಾಗೂ ಪ್ರತಿವಾದಿಯಾಗಲೀ , ಆನಂದಪ್ಪರವರಾಗಲೀ, ಮೋಹನ್‌ಕುಮಾರ್‌ರವರಾಗಲೀ ಹಾಜರಿರಲಿಲ್ಲ ಎಂದರೆ ಸರಿಯಲ್ಲ, ಪ್ರತಿವಾದಿ ನಿಪಿ-೧ ಕ್ಕೆ ಸಹಿ ಮಾಡುವ ಸಮಯಕ್ಕೆ ನಿಪಿ-೧ ರಲ್ಲಿ ಬರವಣಿಗೆ ಅಗಿರಲಿಲ್ಲ ಎಂದರೆ ಸರಿಯಲ್ಲ, ನಿಪಿ-೧ ಕ್ಕೆ ಪ್ರತಿವಾದಿಯ ಬಳಿ ಖಾಲೀ ಪತ್ರಕ್ಕೆ ಸಹಿ ಹಾಕಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ, ಆನಂದ ಹಾಗೂ ಮೋಹನ್‌ಕುಮಾರ್‌ರವರನ್ನು ನ್ಯಾಯಾಲಯದಲ್ಲಿ ಸಾಕ್ಷ್ಯ ಮಾಡಲು ತೊಂದರೆ ಇಲ್ಲ ಎಂದರೆ ಸರಿ. ಪ್ರತಿವಾದಿಯ ವಿಶ್ವಾಸವನ್ನು ದುರುಪಯೋಗ ಮಾಡಿಕೊಂಡು ಪ್ರತಿವಾದಿಯ ವಿರುದ್ದ ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

೨ ಲಕ್ಷ ರೂ.ಗಳನ್ನು ಪ್ರತಿವಾದಿಯು ನಗದಾಗಿ ಪಡೆದುಕೊಂಡಿರುತ್ತಾನೆಂದು ನಿಪಿ-೧ ರಲ್ಲಿ ನಮೂದಾಗಿದೆ ಎಂದರೆ ಸರಿ. ವಾದಪತ್ರದಲಿ ೨ ಲಕ್ಷ ಹಣವನ್ನು ನಗದಾಗಿ ನೀಡಿದ್ದೇನೆಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಪತ್ರದಲ್ಲಿರುವ ಅಂಶಗಳು ಸತ್ಯವೇ ಅಥವಾ ನಿಪಿ-೧ ರಲ್ಲಿರವ ಅಚಿಟಟ ಠಟಿ ಜಿಂಡಿಶಗಳು ಸತ್ಯವೇ ಎಂದರೆ ಸಾಕ್ಷಿ ವಾದಪತ್ರದಲ್ಲಿರವ ಅಂಶಗಳು ಸತ್ಯ, ನಿಪಿ-೧ ರಲ್ಲಿರುವ ಅಂಶಗಳು ಸಹ ಸತ್ಯ ಎಂದು ನುಡಿಯುತ್ತಾರೆ. ವಾದಪತ್ರದಲ್ಲಿರುವ ಅಂಶಗಳು ಮತ್ತು ನಿಪಿ-೧ ರಲ್ಲಿರುವ ಅಂಶಗಳು ಬೇರೆ ಬೇರೆ ಎಂದರೆ ಸರಿ.

ಪ್ರತಿವಾದಿ ೩೦ ಸಾವಿರ ಹಾಗೂ ೪೮ ಸಾವಿರ ರೂ. ಗಳನ್ನು ಪಡೆದುಕೊಂಡ ಬಳಿಕ ಬೇರೆ ಯಾವುದೇ ಹಣ ನನ್ನಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ ಮೂಲಕ ಪ್ರತಿವಾದಿಗೆ ಉಳಿಕೆ ಹಣವನ್ನು ನೀಡಬಹುದಿತ್ತಲ್ಲ ಎಂದರೆ ಸಾಕ್ಷಿ ಆ ದಿನ ನನ್ನ ಬಳಿ ಚೆಕ್ಕು ಇರಲಿಲ್ಲ ಖಾಲಿಯಾಗಿತ್ತೆಂದು ನುಡಿಯುತ್ತಾರೆ. ನಿಪಿ-೧ ನ್ನು ಮಾಡಿದ ದಿನ ೨ ಲಕ್ಷ ನೀಡುವ ಸಂದರ್ಭದಲ್ಲಿ ೩೦ ಸಾವಿರ ಹಾಗೂ ೪೮ ಸಾವಿರ ರೂ ಸಾಲಗಳ ಬಡ್ಡಿಯನ್ನು ಹಿಡಿದುಕೊಂಡು ಕೊಟ್ಟಿರುವುದಿಲ್ಲ. ಪ್ರತಿವಾದಿಗೆ ಯಾವುದೇ ಹಣ ನೀಡಿರುವುದಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ಪ್ರತಿವಾದಿ ನನ್ನ ತೋಟದ ಕೆಲಸಕ್ಕೆ ಬರುತ್ತಿದ್ದ ಎಂದರೆ ಸಾಕ್ಷಿ ಒಂದು ಸಲ ಬಂದಿದ್ದ ಅದನ್ನು ಹೊರತು ಪಡಿಸಿ ಬೇರೆ ಸಂದರ್ಭದಲ್ಲಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಕೇವಲ ಒಂದು ಸಲ ಕೆಲಸಕ್ಕೆ ಬಂದ ಕಾರಣಕ್ಕೆ ಇಷ್ಟೊಂದು ಹಣವನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಪ್ರತಿವಾದಿಯು ಅಕ್ಕಪಕ್ಕದ ಊರಿನವರಾದ್ದರಿಂದ ನನಗೆ ಪರಿಚಯ ಇತ್ತೆಂದು ನುಡಿಯುತ್ತಾರೆ. ಪ್ರತಿವಾದಿಯು ೪೮ ಸಾವಿರ ನನ್ನಿಂದ ಪಡೆದ ಹಣವನ್ನು ಮರಳಿ ನೀಡಿರುತ್ತಾರೆಂದರೆ ಸರಿಯಲ್ಲ, ಪ್ರತಿವಾದಿ ನನ್ನ ಬಳಿ ಪಡೆದುಕೊಂಡಂತಹ ೩೦ ಸಾವಿರ ಹಣವನ್ನು ನೀಡಲು ಬಂದಾಗ ನಾನು ತೆಗೆದುಕೊಳ್ಳಲಿಲ್ಲ ಎಂದರೆ ಸರಿಯಲ್ಲ.

ಅಪ್ಪಣ್ಣ ಹಾಗೂ ಶ್ರೀರಂಗಪ್ಪರವರ ಬಗ್ಗೆ ನನಗೆ ಗೊತ್ತೆಂದರೆ ಸರಿ. ಸದರಿಯವರು ನಮ್ಮ ಪಕ್ಕದ ಗ್ರಾಮದವರು. ಅಪ್ಪಣ್ಣ ಮತ್ತು ಶ್ರೀರಂಗಪ್ಪನವರ ಸಮಕ್ಷಮದಲ್ಲಿ ಪ್ರತಿವಾದಿ ೩೦ ಸಾವಿರ ರೂ. ಹಣವನ್ನು ನನಗೆ ನೀಡಿರುತ್ತಾರೆಂದರೆ ಸರಿಯಲ್ಲ. ಸದರಿ ೩೦ ಸಾವಿರವನ್ನು ನನಗೆ ನೀಡಲು ಬಂದಾಗ ೨ ಲಕ್ಷ ಹಣ ನೀಡಬೇಕೆಂದು ನಾನು ಬೇಡಿಕೆ ಇಟ್ಟೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಅನಕ್ಷರಸ್ಥನಾಗಿದ್ದು ಅವರಿಗೆ ತಿಳುವಳಿಕೆ ಇಲ್ಲದಿದ್ದರಿಂದ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ಅನಕ್ಷರಸ್ಥನಾದ್ದರಿಂದ ಹಾಗೂ ಮುಗ್ದನಾಗಿರುವುದರಿಂದ ಅತನ ವಿರುದ್ದ ಸುಳ್ಳು ದಾಖಲೆಗಳನ್ನು

ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಲೇವಾದೇವಿ ಸಂಸ್ಥೆಯಿಂದ ಪರವಾನಗಿ ಪಡೆದಿದ್ದರೂ ಸಹ ಪಡೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ